ಮತ್ತು ಮೇಲು ತೊಟ್ಟಿ ನಿರ್ಮಾಣ, ಒಳ ಮತ್ತು ಹೊರ ನೀರು ಸರಬರಾಜು ವ್ಯವಸ್ಥೆ ಹಾಗೂ ನೈರ್ಮಲೀಕರಣದ ವ್ಯವಸ್ಥೆ.

ಊ) ಕಾಮಗಾರಿಯನ್ನು ಜುಲೈ 2001ಕ್ಕೆ ಎಲ್ಲಾ ರೀತಿಯಲ್ಲೂ ಪೂರ್ಣಗೊಳಿಸಲಾಗುವುದು.

ರಾಜ್ಯದಲ್ಲಿ ಬಿ.ಪಿ.ಎಲ್. ಪಟ್ಟಿ ಯ ತಯಾರಿ

674(1114) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ರಾಜ್ಯದಲ್ಲಿ ಒಟ್ಟು ಎಷ್ಟು ತಾಲ್ಲೂಕಿನಲ್ಲಿ ಬಿ.ಪಿ.ಎಲ್. ಪಟ್ಟಿಯ ಸಿದ್ಧತೆ ಪೂರ್ಣಗೊಂಡಿದೆ, ಹಾಗೂ ತೀರ್ಥ ಮತ್ತು ತಾಲ್ಲೂಕಿನ ಪಟ್ಟಿ ಎಲ್ಲಾ ಹಂತದಲ್ಲೂ ಪೂರ್ಣಗೊಂಡಿದೆಯೇ?

ಆ) ಬಿ.ಪಿ.ಎಲ್. ಪಟ್ಟಿ ಆಧಾರದ ಮೇಲೆ ಸರ್ಕಾರದಿಂದ ಯಾವ ಯಾವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ?

ಇ) ಬಿ.ಪಿ.ಎಲ್. ಪಟ್ಟಿ ತಯಾರಾಗಿಲ್ಲವೆಂಬ ಕಾರಣಕ್ಕಾಗಿ ಸರ್ಕಾರದ ಯಾವುದಾದರೂ ಯೋಜನೆಯು ಅನುಷ್ಠಾನಗೊಳ್ಳದೇ ಬಾಕಿ ಇರುತ್ತದೆಯೇ?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) 1997 ರ ಕೇಂದ್ರ ಸರ್ಕಾರದ ಮಾರ್ಗ ಸೂಚಿ ಪ್ರಕಾರ 9 ನೇ ಯೋಜನಾವಧಿ 1997-98 ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಬಿ.ಪಿ.ಎಲ್ ಪಟ್ಟಿಯ ಸಿದ್ಧತೆ ಪೂರ್ಣಗೊಂಡಿದೆ.

ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕಿನ ಬಿಪಿ ಎಲ್ ಪಟ್ಟಿ ಪೂರ್ಣಗೊಂಡಿದೆ.

ಆ) ಬಿ.ಪಿ.ಎಲ್. ಪಟ್ಟಿ ಆಧಾರದ ಮೇಲೆ ಎಸ್ ಜಿ ಎಸ್ ವೈ, ಮುಂತಾದ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಇ) ಇಲ್ಲ.

ಕಾಲೇಜುಗಳಿಗೆ ಕಟ್ಟಡ ಸೌಲಭ್ಯ ಒದಗಿಸುವುದು

676 (1104) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ):- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

1) ರಾಜ್ಯದಲ್ಲಿನ ಬಹುತೇಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಕಟ್ಟಡ ಸೌಲಭ್ಯದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2) ಹಾಗಿದ್ದಲ್ಲಿ, ಈ ಕೊರತೆ ನಿವಾರಿಸಲು ಸರ್ಕಾರದ ಉದ್ದೇಶಿತ ಕ್ರಮಗಳೇನು?